**ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**

**ಖಾನಾಪೂರ.**

**ಸಿ.ಸಿ ನಂ:** 1378/2018

ಪಿ.ಡಬ್ಲ್ಯೂ - 7

ಸಿ.ಡಬ್ಲ್ಯೂ - 9

ಹೆಸರು : ಪ್ರಭುದೇವ ಗುರುಪಾದಯ್ಯಾ ಹಿರೇಮಠ

ವಯಸ್ಸು : 59 ವರ್ಷ

ಉದ್ಯೋಗ : ಶಿಕ್ಷಕರು

ವಾಸ : ವಾಗಳೆ ಗಲ್ಲಿ , ತಾಃ ಖಾನಾಪೂರ

ದಿನಾಂಕ 14-11-2025 ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸಸಅ ರವರಿಂದ

ನನ್ನ ಮನೆ ಚಾಸಾ 1 ರವರ ಮನೆಯ ಪಕ್ಕದಲ್ಲಿ ಇರುತ್ತದೆ.

ದಿಃ 28.10.2017 ರಂದು ಚಾಸಾ 1 ಹಾಗೂ ಅವರ ಹೆಂಡತಿ ಗಡಿಂಗ್ಲಜಗೆ ಹೋಗಿದ್ದರು. ಮರುದಿನ ಮುಂಜಾನೆ ನಾನು ನೀರು ತರುವ ಸಲುವಾಗಿ ಹೊರಗೆ ಬಂದಾಗ ಚಾಸಾ 1 ರವರ ಮನೆಯ ಬಾಗಿಲಿನ ಚಿಲಕ ಮುರಿದಿರುವುದನ್ನು ನೋಡಿದೆ. ನಂತರ ನಾನು ಚಾಸಾ 1 ರವರಿಗೆ ಫೋನ ಕರೆ ಮಾಡಿ ವಿಷಯ ತಿಳಿಸಿದೆನು. ರಾತ್ರಿ 08.30 ರಿಂದ 09.30 ರವರೆಗೆ ಅವರು ಬಂದು ಪರಿಶೀಲಿಸಿದಾಗ ಅವರ ಮನೆಯಲ್ಲಿ ಕಳುವಾಗಿರುವ ಬಗ್ಗೆ ಗೊತ್ತಾಗಿರುತ್ತದೆ. ಅದರ ಬಗ್ಗೆ ಚಾಸಾ 1 ರವರು ದೂರನ್ನು ನೀಡಿರುತ್ತಾರೆ. ಕೆಲವು ದಿವಸಗಳ ನಂತರ ಪೊಲೀಸರು ಆರೋಪಿತರನ್ನು ನಮ್ಮ ಮನೆಯ ಹತ್ತಿರ ಕರೆದುಕೊಂಡು ಬಂದರು. ಸಾಕ್ಷಿದಾರರು ಆರೋಪಿತರನ್ನು ವಿಸಿಯಲ್ಲಿ ನೋಡಿ ಗುರುತಿಸಿರುತ್ತಾರೆ. ಪೊಲೀಸರಿಗೆ ನಾನು ಈ ಬಗ್ಗೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ 2ನೇ ಆರೋಪಿ ಪರ ಶ್ರೀ . ಎನ್ ವಾಯ ಎಂ ವಕೀಲರಿಂದಃ**

ನಾನು ಹಾಗೂ ಚಾಸಾ 1 ಅತ್ಯಂತ ಆತ್ಮೀಯರು ಎಂದು ಸೂಚಿಸಿದರೆ ಸರಿ . ಈ ಪ್ರಕರಣದ ಹೆಚ್ಚಿ ನ ಮಾಹಿತಿ ಇರುವುದು ಪೊಲೀಸರಿಗೆ ಎಂದು ಸೂಚಿಸಿದರೆ ಸರಿ . ನಾನು ಅವರ ಮನೆಯ ಮುಂದಿನ ನಳದಲ್ಲಿ ನೀರು ತುಂಬುವಾಗ ಚಿಲಕ ಮುರಿದಿದ್ದನ್ನು ನೋಡಿದ್ದೇನೆ ಎಂದು ಸೂಚಿಸಿದರೆ ಸರಿ . ನಾನು ಚಾಸಾ 1 ರವರಿಗೆ ಆತ್ಮೀಯನಾಗಿದ್ದರಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸಿದರೆ ಸರಿಯಲ್ಲ . ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಅಂಶಗಳು ಸುಳ್ಳು ಇರುತ್ತವೆ ಎಂದು ಸೂಚಿಸಿದರೆ ಸರಿಯಲ್ಲ. ಆರೋಪಿತರನ್ನು ನಾನು ಯಾವತ್ತು ನೋಡಿಲ್ಲ ಎಂದು ಸೂಚಿಸಿದರೆ ಸರಿಯಲ್ಲ .

1ನೇ ಆರೋಪಿ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.